**ಕ್ಷಿಯನ್ನು ಈ ದಿನ ದಿಃ 05.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ

1. ಪೋಲೀಸ್ ಠಾಣೆಯಲ್ಲಿ ಮಹಜರ್ ಮಾಡಿದ ಸಂದರ್ಭದಲ್ಲಿ ನಾನು ಮತ್ತು ಚಾ,ಸಾ.23 ಇದ್ದೆವು. ಚಾ,ಸಾ. 23 ರವರು ರೋಡ್ ರೋಲರ್ ನ ಚಾಲಕ ಎನ್ನುವುದು ಸರಿ . ಚಾ,ಸಾ. 1 ರವರು ರಸ್ತೆ ಕಾಮಗಾರಿಯ ಕಂಟ್ರಾಕ್ಟರ್ ಎನ್ನುವುದು ಸರಿ . ಚಾ,ಸಾ. 1 ರವರ ಬಳಿಯಲ್ಲಿ ರೋಡ್ ರೋಲರ್ ಇದೆ. ಚಾ,ಸಾ. 23 ರವರು ಚಾ,ಸಾ. 1 ರವರ ಕೈ ಕೆಳಗೆ ಕೆಲಸ ಮಾಡುತ್ತಾರೆ ಎನ್ನುವುದು ಸರಿ. ನಾವೆಲ್ಲರು ಕುರಿಮಂಡೆಯಲ್ಲೇ ವಾಸ ಮಾಡುತ್ತೆವೆ ಎನ್ನುವುದು ಸರಿ . ಚಾ,ಸಾ. 1 ನನಗೆ ಗೊತ್ತು. ಚಾ,ಸಾ. 23 ಸಹ ಗೊತ್ತು. ಪೋಲೀಸ್ ಠಾಣೆಗೆ ನನ್ನನ್ನು ಮತ್ತು ಚಾ,ಸಾ. 23 ರವರನ್ನು ಚಾ,ಸಾ. 1 ರವರೇ ಕರೆದುಕೊಂಡು ಹೋಗಿದ್ದರು ಎನ್ನುವುದು ಸರಿಯಲ್ಲ. ಚಾ,ಸಾ. 1 ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಮತ್ತು ಚಾ,ಸಾ. 23 ರವರು ಅವರ ಹೇಳಿಕೆಯಂತೆ ಪೋಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಹಾಕಿರುತ್ತೇವೆ ಎನ್ನುವುದು ಸರಿಯಲ್ಲ.

2. ನನಗೆ ಗೊತ್ತಿರುವವರು 1 ನೇ ಆರೋಪಿ ವಿನಯ್ ನನ್ನು ಠಾಣೆಗೆ ಕರೆದುಕೊಂಡು ಬಂದಿದ್ದಾರೆ ಎಂದು ತಿಳಿಸಿದ್ದರು. ಆದ್ದರಿಂದ ಆತನನ್ನು ನೋಡಲು ಹೋಗಿದ್ದೆವು. 1 ನೇ ಆರೋಪಿ ನನ್ನ ಸ್ನೇಹಿತನೂ ಅಲ್ಲ , ಸಂಬಂಧಿಕನೂ ಅಲ್ಲ ಎನ್ನುವುದು ಸರಿ. 1 ನೇ ಆರೋಪಿ ಕೊಲೆ ಮಾಡಿದ್ದಾನೆ ಎಂದು ತಿಳಿದಿದ್ದರಿಂದ , ಆತನನ್ನು ನೋಡಲು ಠಾಣೆಗೆ ಹೋಗಿದ್ದೆವು.

3. 1 ನೇ ಆರೋಪಿಯ ಜೇಬಿನಿಂದ ಮೊಬೈಲನ್ನು ತೆಗೆಯುವುದನ್ನು ನಂತರ ಆ ಮೊಬೈಲ್ ನ್ನು ಬಿಚ್ಚುವುದನ್ನು ವಿಡಿಯೋ ಮಾಡಿರುವುದಿಲ್ಲ. 1 ನೇ ಆರೋಪಿ ನಮ್ಮ ಮುಂದೆ 'ಆ ಮೊಬೈಲ್ ನಲ್ಲಿ ವಿನಯ್, ರವಿಯನ್ನು ಕೊಲೆ ಮಾಡಿದ ಬಾಬ್ತು ಫೋಟೋಗಳನ್ನು ಹಾಗೂ ಮೆಸೇಜ್ ನ್ನು ಜಯಸೂರ್ಯ ಎನ್ನುವವನಿಗೆ ಕಳುಹಿಸಿರುತ್ತೇನೆ ' ಎಂದು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೋಲೀಸರು 1 ನೇ ಆರೋಪಿಯಿಂದ ಪಡೆದ ಮೊಬೈಲನ್ನು ತೆಗೆದು ತೋರಿಸಿದಾಗ , ಅದರಲ್ಲಿ ಸಿಮ್ ಕಾರ್ಡ ಇರಲಿಲ್ಲ. ಆ ಮೊಬೈಲನ್ನು ಅಮಾನುತ್ತ ಪಡಿಸಿಕೊಂಡಾಗ ಯಾವ ಅಕ್ಷರದ ಸೀಲನ್ನು ಪೋಲೀಸರು ಹಾಕಿದರು ಎನ್ನುವುದು ಗೊತ್ತಿಲ್ಲ. ಎಂ ಒ 11 ಮತ್ತು 12 ರ ಮೇಲೆ ಇರುವ ಚೀಟಿಗಳಲ್ಲಿ ನನ್ನ ಸಹಿ ಇರುವುದಿಲ್ಲ. ಎಂ ಒ 11 ಮತ್ತು 12 ನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಆ ದಿನ ಪೋಲೀಸ್ ಠಾಣೆಗೆ ಹೋಗಿರುವುದೇ ಇಲ್ಲ ಎನ್ನುವುದು ಸರಿಯಲ್ಲ.

4. ನಾನು ಗೂಡ್ಸ್ ಗಾಡಿಯ ಚಾಲಕ. ದಿಃ 03.03.2021 ರಂದು ಪೋಲೀಸರು ನನ್ನನ್ನು ಕರೆದು , ಆ ದಿನ ಅಮಾನತ್ತು ಪಡಿಸಿಕೊಂಡಂತಹ ಮೊಬೈಲ್ ಗೆ ಸಿಮ್ ಕಾರ್ಡ ನ್ನು ಅಳವಡಿಸಬೇಕು, ಬನ್ನಿ ಎಂದು ಕರೆದರು. ಅವರು ಕರೆದಾಗ ನಾನು ನಡೆದುಕೊಂಡು ಹೋಗುತ್ತಿದ್ದೆ. ಆಗ ಸಮಯ ಮಧ್ಯಾಹ್ನ 02.30 ಆಗಿತ್ತು. ಮನೆ ಸಾಮಾನನ್ನು ತೆಗೆದುಕೊಂಡು ಹೋಗಲು ಗಾಡಿಯನ್ನು ಬಾಡಿಗೆಗೆ ಕರೆದಿದ್ದರು. ಹೀಗಾಗಿ ಆ ಮನೆಯನ್ನು ನೋಡಲು ಆ ಸಮಯದಲ್ಲಿ ಹೋಗುತ್ತಿದ್ದೆ. ಹಾಗೆ ಬಾಡಿಗೆಗೆ ಕರೆದವರ

ಹೆಸರು ನನಗೀಗ ನೆನಪಿಲ್ಲ. ಈ ವಿಷಯವನ್ನು ಪೋಲೀಸರ ಮುಂದೆ ನಾನು ಹೇಳಿರುವುದಿಲ್ಲ.

5. ಠಾಣೆಗೆ ಹೋದಾಗ ಅಲ್ಲಿ ಡ್ಯೂಪ್ಲಿಕೇಟ್ ಸಿಮ್ 1 ನೇ ಆರೋಪಿಯ ಬಳಿಯಲ್ಲಿ ಇತ್ತು. ಅದನ್ನು ಯಾರು ಕೊಟ್ಟರು ಎಂದು ಹೇಳಿರುವುದಿಲ್ಲ. ಅದು ಜಿಯೋ ಕಂಪನಿಯ ಸಿಮ್ ಕಾರ್ಡ ಆಗಿತ್ತು. ಅದರ ನಂಬರ್ ನನಗೆ ಗೊತ್ತಿಲ್ಲ. 1 ನೇ ಆರೋಪಿ ಅಲ್ಲಿ ನಮ್ಮ ಸಮಕ್ಷಮ ಆ ಸಿಮ್ ನಲ್ಲಿ ಇದ್ದಂತಹ ಪೋಟೋಗಳು ಮತ್ತು ಮೆಸೇಜ್ ಗಳನ್ನು ನಾನು ಡಿಲೀಟ್ ಮಾಡಿರುತ್ತೇನೆ ಎಂದು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸೀಲು ಮಾಡಿದ್ದ ಬಿಳಿಯ ಬಟ್ಟೆಯ ಬ್ಯಾಗ್ ನಿಂದ ಮೊಬೈಲನ್ನು ತೆಗೆದು ನಂತರ ಅದಕ್ಕೆ ಸಿಮ್ ಕಾರ್ಡನ್ನು ಅಳವಡಿಸಿದರು. ನಂತರ ಪುನಃ ಅದನ್ನು ಸೀಲು ಮಾಡುವಾಗ ನನ್ನ ಸಹಿಯನ್ನೇನು ಪಡೆದಿರುವುದಿಲ್ಲ. ಆ ಸಮಯದಲ್ಲಿ ನಾನು ಪೋಲೀಸ್ ಠಾಣೆಯಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಚಾ,ಸಾ. 1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ 37 ಮತ್ತು 38 ಪೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತರ ಪರ ವಕೀಲರಿಂದಃ

6. ನನ್ನ ಮನೆ ಕೆಸರೆ ಯಲ್ಲಿದೆ. ದಿಃ 10.02.2021 ರಂದು ನಾನು ಪೋಲೀಸ್ ಠಾಣೆಗೆ ಹೋಗಲು ಪೋಲೀಸರು ಲಿಖಿತ ನೋಟೀಸನ್ನೇನು ನೀಡಿರುವುದಿಲ್ಲ. ನಿಪಿ 35

ಮಹಜರ್ ನಲ್ಲಿ ಮೊಬೈಲ್ ನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ಮಾತ್ರ ಇರುತ್ತದೆ ಎಂದು ಹೇಳಿದರು. ಅದನ್ನು ನಾನು ಓದಿ ನೋಡಿರುವುದಿಲ್ಲ. ದಿಃ 10.02.2021 ರ ನಂತರ ಪುನಃ ನಾನು ಠಾಣೆಗೆ ಹೋಗಿರುವುದಿಲ್ಲ. 1 ನೇ ಆರೋಪಿ ಪ್ಯಾಂಟ್ ಧರಿಸಿದ್ದ. ಆ ಪ್ಯಾಂಟ್ ನ ಬಲ ಜೇಬಿನಿಂದ ಮೊಬೈಲ್ ನ್ನು ತೆಗೆದುಕೊಟ್ಟ . 10.02.2021 ರಂದು ನಾನು ಪೋಲೀಸ್ ಠಾಣೆಗೆ ಹೋಗುವ ಮುನ್ನ ಎಷ್ಟು ಹೊತ್ತಿಗೆ 1 ನೇ ಆರೋಪಿಯನ್ನು ಪೋಲೀಸರು ಆ ಠಾಣೆಗೆ ಕರೆ ತಂದಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಮೊಬೈಲ್ ಆಫ್ ಆಗಿತ್ತು. ಪೋಲೀಸರು ನನ್ನ ಎದುರಿನಲ್ಲಿ ಅದನ್ನು ಚಾರ್ಜ ಗೆ ಹಾಕಿರುವುದಿಲ್ಲ. ಅದರಲ್ಲಿ ಸಿಮ್ ಇರಲಿಲ್ಲ.

7. ಆ ಡು ್ಯಾಪ್ಲಿಕೇಟ್ ಸಿಮ್ ನಂಬರ್ ನನಗೆ ಗೊತ್ತಿಲ್ಲ. ಅದು ಜಿಯೋ ಸಿಮ್ ಆಗಿತ್ತು. ಆ ಮೊಬೈಲ್ ನ್ನು ಪೋಲೀಸರು ಕೆಂಪು ಬಣ್ಣದಿಂದ ಸೀಲು ಮಾಡಿದರು. ಸೀಲಿನ ಅಕ್ಷರ ಯಾವುದೆಂದು ನನಗೆ ಗೊತ್ತಿಲ್ಲ. ಆ ಮೊಬೈಲ್ ಗೆ ಡ್ಯೂಪ್ಲಿಕೇಟ್ ಸಿಮ್ ನ್ನು ಅಳವಡಿಸಿ ಅಮಾನತ್ತು ಪಡಿಸಿಕೊಂಡರು. ಅದರಿಂದ ಪೋಟೋಗಳನ್ನಾಗಲೀ, ಮೆಸೇಜ್ ಗಳನ್ನಾಗಲೀ ನನಗೆ ತೋರಿಸಲಿಲ್ಲ. ಆ ಮೊಬೈಲ್ ನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ನೋಡಬೇಕು ಎಂದು ಮಾತನಾಡಿಕೊಳ್ಳುತ್ತಿದ್ದರು. ಮೊಬೈಲನ್ನು ಅಮಾನತ್ತು ಪಡಿಸಿಕೊಂಡ ನಂತರ ಪೋಟೋ ತೆಗೆದರು. ಅದನ್ನು ಅಮಾನತ್ತು ಪಡಿಸಿಕೊಳ್ಳುವಾಗ ಮಹಜರ್ ಮಾಡಿರುವುದಿಲ್ಲ. ನಿಪಿ 37 ಮತ್ತು 38 ರಂತೆ ಅಲ್ಲಿ ಪೋಟೋ ತೆಗೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಎನ್ ಆರ್ ಠಾಣೆಯಲ್ಲಿ ಮೇಲ್ಕಂಡ ಪ್ರಕ್ರಿಯಗಳನ್ನು ನಡೆಸಿದರು. ಪೋಲೀಸರು ನನ್ನ ಎದುರಿನಲ್ಲಿ ಮೊಬೈಲನ್ನು ಸೀಲು ಮಾಡಿದ ಬ್ಯಾಗ್ ನಿಂದ ತೆರೆದಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಅಲ್ಲಿ ಯಾವುದೇ ಮೊಬೈಲನ್ನು

ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ. ಅದು ನೀಲಿ ಬಣ್ಣದ ಮೊಬೈಲ್ . ಅದರ ಹಿಂದೆ ಸ್ಟೀಕರ್ ಏನಾದರು ಇತ್ತೋ ಇಲ್ಲವೋ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಪೋಲೀಸರ ಹೇಳಿಕೆಯಂತೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**